SCARCITY CONDITIONS IN SOME DISTRICT OF THE STATE

ಶ್ರೀ ಬಾಪೂಗೌಡ ರಾಯಪ್ಪ (ಶಹಾಬಾದ್).—ಮಾನ್ಯ ಅಧ್ಯಕ್ಷರೇ, ಹುಮ್ನಾಬಾದಿನಲ್ಲಿ ಹುಲಸ ನಾಡಿನ ಹತ್ತಿರ ಶ್ರೀ ಪಾರ್ವತಿರಾವ್ ಅವರ ಮಗ ಸೂರ್ಯಭಾನು ಎಂಬುವರು ಸೊಸೈಟಿ ಮಾಡಿಕೊಂಡು ಬಡ್ಡಿ ಇಲ್ಲದೆ ಸಾಲವನ್ನು ಕೊಟ್ಟು ಅಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಸಾವಿರಾರು ಜನರು ಅಲ್ಲಿಗೆ ಬಂದು ಕೆಲಸಕೊಡಿ ಎಂದು ಕೇಳುತಿದ್ದಾರೆ ಬಸ್ಸುಗಳಲ್ಲಾದರ ಕೆಲಸಕೊಡಿಸಿ ಎಂದು ಕೆಳುತ್ತಿದ್ದಾರೆ. ಅನೇಕ ಜನರಿಂಲ್ಲಿ ಕೆಲಸವಿಲ್ಲದೆ ಕಂಗಾಲಾಗಿ ತಹಸೀಲ್ದಾರ್‌ರಿಂದು ಘೇರಾವೋ ಮಾಡುತ್ತಿದ್ದಾರೆ. ಆ ಪ್ರದೇಶದಲ್ಲಿ ಸುಮಾರು ೮ ಸಾವಿರ ಜನರು ಕೆಲಸಕೊಡಿ ಎಂದು ಕೇಳುತ್ತಿದ್ದಾರೆ.

ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆಯೆಂಬುದನ್ನು ತಿಳಿದುಕೊಂಡು ತೀವ್ರ ಪರ್ಯಾಲೋಚನೆ ಮಾಡುತ್ತಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾಡುತ್ತೇನೆ.

ಶ್ರೀ ಕೆ ಬಿ. ಶಿವಯ್ಯ (ನಂಜನಗೂಡು — ಮೈಸೂರಿನಲ್ಲಿ ನಂಜನಗೂಡು ಸಬ್ ಡಿವಿಷನ್‌ನಲ್ಲಿ ಜೋಳದ ಬೆಳೆ ಪೂರಾ ಹಾಳಾಗಿ ಹೋಗಿದೆ. ಕುಡಿಯುವುದಕ್ಕೂ ನೀರು ಸಿಗುತ್ತಾ ಇಲ್ಲ. ಇದರಬಗ್ಗೆ ಹೆಚ್ಚಿನ ತೀವ್ರ ಗಮನಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅದರ ಬಗ್ಗೆ ಗಮನಕೊಡಲಾಗುತ್ತದೆ.

ಶ್ರೀ ಬಿ. ಪುಟ್ಟಸಾಮಯ್ಯ (ಸಿರಾ).—ಚಿಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ಪರಿಸ್ಥಿತಿ ಅದರಲ್ಲಿಯೂ ಕೆಲವು ಪ್ರದೇಶಗಳು ಹೋಪ್‌ಲೆಸ್ ಆಗಿದೆ. ಇನ್ನೂ ಸರಿಯಾಗಿ ಬಿತ್ತನೆ ಆಗಲಿಲ್ಲ. ಆದ್ದರಿಂದ ಅಲ್ಲಿಗೂ ಕೂಡ ಸ್ವಲ್ಪ ಹಣ ಒದಗಿಸಿ ಕೊಡಬೇಕು. ಕೂಲಿ ಹಣ ಹೆಚ್ಚಿಗೆಸಿಗುವ ಹಾಗೇ ಮಾಡಬೇಕೆಂದೂ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಕೆಲವು ಪ್ರದೇಶಗಳಲ್ಲಿ ರಾಗಿ ಬೆಳೆಗೆ, ಕಡಲೇಕಾಯಿ ಬೆಳೆಗೆ ಹುಳುಗಳು ಬಿದ್ದಿವೆ. ರೈತನಾದವನು ಅದಕ್ಕೆ ಔಷದಿ ಹಾಕಿ ತಡೆಗಟ್ಟಿದರೂ ಆಗುತ್ತಾ ಇಲ್ಲ ಆದ್ದರಿಂದ ಸರ್ಕಾರದವರು ಒಂದು ಮಾಸ್ ಪ್ರೋಗ್ರಾಂ ಹಾಕಿಕೊಂಡು ಔಷಧಿಯನ್ನು ಸಿಂಪಡಿಸುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು ನಮ್ಮ ಪ್ರದೇಶದ ಅಭಾವ ಸ್ಥಿತಿಯ ಕಡೆಗೂ ಸಂಬಂಧಪಟ್ಟ ಮಂತ್ರಿಗಳು ಗಮನಕೊಟ್ಟು ಅದನ್ನು ತಡೆಗಟ್ಟಬೇಕೆಂದೂ ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ. ನಾನು ಮೊದಲೇ ಹೇಳಿದ ಹಾಗೆ ಆ ನಾಲ್ಕು ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲಿಯೂ ಅದರ ಬಗ್ಗೆ ಗಮನಕೊಟ್ಟಿದ್ದಾರೆ. ಸರ್ಕಾರದವರು ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸ್ನೇಹಿತ ರೊಬ್ಬರು ಒಬ್ಬ ಮನುಷ್ಯ ಬಾಲ್ಕಿ ಹುಮನಾಬಾದಿನಲ್ಲಿ ಆತ್ಮಹತ್ಯ ಮಾಡಿಕೊಂಡಿದ್ದಾನೆ ಎಂದು ಹೇಳಿದರು ಅದಕ್ಕೆ ಏನೂ ಸಾಕ್ಷಿ ಸಿಗುವುದಿಲ್ಲ. ಅದು ಕಷ್ಟ.

ಮಾನ್ಯ ಶ್ರೀ ಬಾಪುಗೌಡ ಅವರು ಹೇಳಿದ ವಿಷಯವನ್ನು ಚೆನ್ನಾಗಿ ತಿಳಿದು ಅದಕ್ಕೇನು ಮಾಡಬೇಕೊ, ಬಂದನ್ನು ಈ ಸಭೆಗೆ ತಿಳಿಸಬೇಕಾಗಿದೆ. ಅಲ್ಲಿಯೂ ಕೂಡ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಸಾಕಾದಷ್ಟು ಹಣವನ್ನು ಒದಗಿಸಿದ್ದೇವೆ. ಅಲ್ಲಿ ೭-೮ ಸಾವಿರ ಜನರು ಅಲ್ಲಿನ ತಹಸೀಲ್ದಾರರನ್ನು ಘೇರಾವೊ ಮಾಡಿದ್ದಾರೆ. ಅವರ ಅಫೀಸಿಗೆ ಮುತ್ತಿಗೆ ಹಾಕಿದ್ದಾರೆಂದು ಹೇಳಿದರು. ಈ ವಿಷಯ ತಿಳಿದು ಸಭೆಗೆ ತಿಳಿಸುತ್ತೇನೆ. ನನಗೆ ತಿಳಿದಿರುವ ಪ್ರಕಾರ, ಅಲ್ಲಿನ ಕೆಲಸಕಾರ್ಯಗಳ ಬಗ್ಗೆ ಅನೇಕ ಕೆಲಗಳನ್ನು ಈಗ ಪ್ರಾರಂಭಮಾಡಿದ್ದಾರೆ. ಇನ್ನೂ ಹೆಚ್ಚು ಮಾಡುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ, ಎಷ್ಟರ ಮಟ್ಟಿಗೆ ಅಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ನಾನು ತಿಳಿದು ಈ ಸಭೆಗೆ ಬೇಕಾದರೆ ತಿಳಿಸುತ್ತೇನೆ. ಮೈಸೂರಿನ ಕೆಲವು ಭಾಗ ಅವರಲ್ಲಿಯ ೂ ರಾಮನಗರದಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ ಅಲ್ಲಿಗೂ ಹಣವನ್ನು ಒದಗಿಸಿದ್ದೇವೆ. ಅಲ್ಲಿ ಕೆಲಸಗಳನ್ನು ಎಷ್ಟು ತೆಗೆದು ಗೊಂಡಿದ್ದಾರೆಂಬುದನ್ನು ತಿಳಿದು ನಾನು ಹೇಳಬೇಕಾಗಿದೆ. ಒಟ್ಟಿನಲ್ಲಿ ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಆಸ್ಥೆ ವಹಿಸಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.